# ಕನ್ನಡ ಸಾಹಿತ್ಯ ಲೋಕಕ್ಕೆ ಬನ್ನಂಜೆಯವರ ಕೊಡುಗೆ

**ಅಕ್ಷತಾ***

**DOI: https://doi.org/10.5281/zenodo.20613699**

**ABSTRACT**

ಪದ್ಮಶ್ರೀ ಬನ್ನಂಜೆ ಗೋವಿಂದಾಚಾರ್ಯರು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಅಗಾಧ ಪಾಂಡಿತ್ಯವನ್ನು ಹೊಂದಿದ್ದು, ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಸೃಜನಶೀಲ ಸಾಹಿತ್ಯ, ಅನುವಾದ, ನಾಟಕ, ಕವಿತೆ ಹಾಗೂ ವಿಮರ್ಶೆಯ ಮೂಲಕ ಅವರು ಕನ್ನಡದ ಘನತೆಯನ್ನು ಹೆಚ್ಚಿಸಿದ್ದಾರೆ. ಕಾಳಿದಾಸ, ಶೂದ್ರಕ, ಭವಭೂತಿ ಮುಂತಾದವರ ಸಂಸ್ಕೃತ ಕೃತಿಗಳನ್ನು ಕನ್ನಡಕ್ಕೆ ಅತ್ಯದ್ಭುತವಾಗಿ ರೂಪಾಂತರಿಸಿದ ಅವರ ಕೌಶಲ್ಯ ಅನನ್ಯವಾದುದು. 'ಬನ್ನಂಜೆ ಬರೆಹಗಳು' ಸಂಪುಟಗಳಲ್ಲಿ ಅವರ ವೈವಿಧ್ಯಮಯ ಚಿಂತನೆಗಳು, ಸಂಶೋಧನೆ ಮತ್ತು ವಿಶಿಷ್ಟ ದರ್ಶನಗಳು ಅಡಕವಾಗಿವೆ. ಸಾಹಿತ್ಯ ಕೃಷಿ ಮಾತ್ರವಲ್ಲದೆ, ಪತ್ರಿಕೋದ್ಯಮ ಹಾಗೂ ಚಲನಚಿತ್ರ ಕ್ಷೇತ್ರಕ್ಕೂ (ಕಥೆ, ಚಿತ್ರಕಥೆ, ಸಂಭಾಷಣೆ) ಅವರು ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಯಾವುದೇ ಅನ್ಯ ಆಕರಗಳ ಹಂಗಿಲ್ಲದೆ, ಕೇವಲ ತಮ್ಮ ಅದ್ಭುತ ಸ್ಮರಣಶಕ್ತಿ ಮತ್ತು ವಿಷಯಜ್ಞಾನದಿಂದಲೇ ಆಳವಾದ ಒಳನೋಟಗಳನ್ನು ನೀಡಿದ 'ವಿದ್ಯಾವಾಚಸ್ಪತಿ' ಬನ್ನಂಜೆಯವರ ಬಹುಮುಖಿ ಸಾಧನೆ ಹಾಗೂ ಅವರ ಅಪೂರ್ವ ಸಾಹಿತ್ಯಿಕ ಮೌಲ್ಯಗಳನ್ನು ಇಲ್ಲಿ ಕಟ್ಟಿಕೊಡಲಾಗಿದೆ.

**KEYWORDS:** ಬನ್ನಂಜೆ ಗೋವಿಂದಾಚಾರ್ಯ, ಕನ್ನಡ ಸಾಹಿತ್ಯ, ಸೃಜನಶೀಲ ಅನುವಾದ, ಬನ್ನಂಜೆ ಬರೆಹಗಳು, ವಿದ್ಯಾವಾಚಸ್ಪತಿ.

* **ಅಕ್ಷತಾ,** ಸಂಶೋಧನಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ಕನ್ನಡ ಸಾಹಿತ್ಯವು ತನ್ನದೇ ಆದ ವಿಶಿಷ್ಟ ಚರಿತ್ರೆಯನ್ನು ಹೊಂದಿದೆ. ಜಗತ್ತಿನ ಸರ್ವಶ್ರೇಷ್ಠ ಭಾಷೆಗಳಲ್ಲಿ ಕನ್ನಡದ ಹಿರಿಮೆಯಿದೆ. ಅನೇಕ ಕವಿಗಳು, ಚಿಂತಕರು, ಲೇಖಕರು, ಸಾಹಿತಿಗಳು ಈ ಹಿರಿಮೆಯ ಪಾಲುದಾರರಾಗಿರುವರು. ಅಂತಹ ಮುಕುಟಮಣಿಗಳಲ್ಲಿ ತಿಲಕಪ್ರಾಯರಾದವರು ಪದ್ಮಶ್ರೀ ಬನ್ನಂಜೆ ಗೋವಿಂದಾಚಾರ್ಯರು. ಅವರು ಸವ್ಯಸಾಚಿಯೇ ಸರಿ. ಸಂಸ್ಕೃತ ಮತ್ತು ಕನ್ನಡ ಉಭಯ ಭಾಷೆಗಳಲ್ಲಿಯೂ ಪಾಂಡಿತ್ಯ ಹೊಂದಿದ್ದು, ಎರಡೂ ಬಗೆಯ ಸಾಹಿತ್ಯಕ್ಕೆ ಉತ್ಕೃಷ್ಟ ಕೊಡುಗೆ ನೀಡಿರುವರು. ಸಂಸ್ಕೃತದಲ್ಲಿ ರಚನೆಯಾದ ಇವರ ಕೃತಿಗಳು ಸರಿಸುಮಾರು 43. ಕನ್ನಡದ ಕೃತಿಗಳ ಸಂಖ್ಯೆ ನೂರಕ್ಕೆ ಹತ್ತಿರವಿರುವುದು, ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆಯಲ್ಲದೇ ಮತ್ತೇನೂ ಆಗಲಾರದು. ಬನ್ನಂಜೆಯವರನ್ನು ಪರಿಚಯಿಸುವುದರಲ್ಲಿಯೂ, ಸೂರ್ಯ- ಚಂದ್ರರನ್ನು ಪರಿಚಯಿಸುವುದರಲ್ಲಿಯೂ ಹೆಚ್ಚೇನೂ ವ್ಯತ್ಯಾಸವಿರಲಾರದು. ಅಷ್ಟೊಂದು ಮನೆಮಾತಾಗಿರುವ ಬನ್ನಂಜೆ ತಮ್ಮ ಉಪನ್ಯಾಸ, ಚಿಂತನೆಗಳಿಂದ ಅಸಂಖ್ಯಾತ ಜನಮಾನಸದಲ್ಲಿ ಇಂದಿಗೂ ಜೀವಂತವಾಗಿಯೇ ಉಳಿದಿದ್ದಾರೆ. ಮೇರು ವ್ಯಕ್ತಿತ್ವದ ಆಚಾರ್ಯರು ಸಾಹಿತ್ಯ ಸರಸ್ವತಿಗೆ ಗೈದ ಸೇವೆ ಅಪಾರ. ಸ್ಥೂಲವಾಗಿ ಒಂದಷ್ಟು ಅಂಶಗಳನ್ನು ಇಲ್ಲೊಮ್ಮೆ ಮೆಲುಕು ಹಾಕುವ ಪ್ರಯತ್ನ ಮಾಡಬಹುದು.

ಸಾಹಿತ್ಯವೆಂಬುದು ಸಮುದ್ರದಷ್ಟೇ ಆಳ ಮತ್ತು ವಿಶಾಲ. ಅದನ್ನು ದೂರದಿಂದ ನೋಡುವುದಕ್ಕೂ, ಅದರ ಆಳಕ್ಕೆ ಇಳಿಯುವುದಕ್ಕೂ ವ್ಯತ್ಯಾಸವಿದೆ. ಅದು ಅನುಭವಗಮ್ಯವಾದುದು. ಆಚಾರ್ಯರ ಚಿಂತನೆಗಳು ಇದಕ್ಕೆ ಹೊರತಾಗಿಲ್ಲ. ಅವರ ಬಹುಮುಖ ಪ್ರತಿಭೆಯೇ ಇದಕ್ಕೆ ಕಾರಣ. ಸೃಜನಶೀಲತೆ, ಅನುವಾದ, ಅದರಲ್ಲಿಯೂ ನಾಟಕಗಳು, ಕವಿತೆಗಳು, ಸೂಕ್ತಗಳು ಮೊದಲಾಗಿವೆ. ಸಂಸ್ಕೃತ ಸಾಹಿತ್ಯದಲ್ಲಿ ಕಾಳಿದಾಸ, ಶೂದ್ರಕ, ಭವಭೂತಿ, ಬಾಣಭಟ್ಟರ ಪ್ರಭಾವ ಹೆಚ್ಚಾಗಿರುವಂತೆ, ಕನ್ನಡ ಸಾಹಿತ್ಯದಲ್ಲಿ ಬೇಂದ್ರೆ, ಮೊದಲಾದ ಕವಿಗಳ ಪ್ರಭಾವ ಆಚಾರ್ಯರ ಮೇಲೆ ದಟ್ಟವಾಗಿರುವುದು ಗಮನಕ್ಕೆ ಬರುತ್ತದೆ. ಹಲವು ವಿಷಯಗಳ ಬಗ್ಗೆ ಬೇರೆ ಬೇರೆ ರೀತಿಯ ಅಭಿಪ್ರಾಯಗಳು ಈಗಾಗಲೇ ಗಟ್ಟಿಯಾಗಿ ನೆಲೆಗೊಂಡಿದ್ದರೂ, ಅಲ್ಲಿ ಬನ್ನಂಜೆಯವರಿಗೆ ಹೊಸ ಚಿಂತನೆಯೇ ರೂಪಗೊಂಡಿರುತ್ತದೆ. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಲ್ಲಿ ಅವರಿಗೆ ಹಿಂಜರಿಕೆಯಿಲ್ಲ. ಅದು ಉದ್ಧಟತನವಾಗಲೀ, ನಾಸ್ತಿಕತೆಯಾಗಲೀ, ಪರಂಪರೆಯ ವಿರೋಧವಾಗಲೀ ಅಲ್ಲ, ಬದಲಾಗಿ ಅನೇಕ ತಪ್ಪು ಗ್ರಹಿಕೆಗಳ ಪರಿಹಾರವೇ ಆಗಿರುತ್ತದೆ.

ಕನ್ನಡ ಸಾಹಿತ್ಯದ ಸಂಗತಿಗಳ ಕಡೆಗೆ ಗಮನ ಹರಿಸಿದಾಗ ಎದ್ದು ಕಾಣುವ ಹಲವು ಅಂಶಗಳಿವೆ. ಬೇಂದ್ರೆಯಂತಹ ಭಾಷಾ ಸೊಗಡು, ಸಂಖ್ಯಾಶಾಸ್ತ್ರವನ್ನು ಅವರು ದುಡಿಸಿಕೊಂಡ ಬಗೆ, ಪದಗಳ ನಿಗೂಢಾರ್ಥ, ಕಲ್ಪನೆಗೂ ಮೀರಿದ ದರ್ಶನ, ಇವುಗಳು ಪ್ರಮುಖವೆನಿಸಿವೆ. ವಾಕ್ಯ, ಪದಗಳಲ್ಲದೇ ಕೆಲವೇ ಕೆಲವು ಅಕ್ಷರಗಳಲ್ಲಿ, ಸೃಷ್ಟಿಕಾರ್ಯ ಕೈಗೊಳ್ಳುವಂತಹ ಅವರ ಅದ್ಭುತ ಪ್ರತಿಭೆಗೆ ತಲೆಬಾಗದವರಿಲ್ಲ.

ಅಂತೆಯೇ ಬನ್ನಂಜೆಯವರ ಬಿಡಿ ಲೇಖನಗಳು ನೂರಾರು. ಹಲವು ಪುಸ್ತಕ ಪತ್ರಿಕೆಗಳಲ್ಲಿ ಪ್ರಕಟವಾದವುಗಳು. ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಅಪೂರ್ವ ವಿಷಯಗಳನ್ನೆಲ್ಲ ಸಂಗ್ರಹಿಸಿ 'ಬನ್ನಂಜೆ ಬರೆಹಗಳು' ಎಂಬ ಶೀರ್ಷಿಕೆಯಲ್ಲಿ ಸುಮಾರು ಐದು ಸಂಪುಟಗಳು ಪ್ರಕಟವಾಗಿವೆ. ಉಪಲಬ್ಧ ಬರೆಹಗಳು ಮಾತ್ರ ಇಲ್ಲಿವೆ. ಅದೆಷ್ಟೋ ಅನುಪಲಬ್ಧ ಲೇಖನಗಳು ಹಾಗೆಯೇ ಉಳಿದುಕೊಂಡಿವೆ. 'ಬನ್ನಂಜೆ ಬರೆಹಗಳು–3' ರಲ್ಲಿನ "ಅಕ್ಷರ ವಿಹಾರ","ದುಷ್ಯಂತ–ದುಃಷಂತ" ಹೆಸರಿನ ವಿವೇಚನೆ, "ಕೆಲವು ಅಪಶಬ್ದಗಳು: ವೈಯಾಕರಣರ ಕೊಡುಗೆ", ಮೊದಲಾದ ಅಪೂರ್ವ ವಿಷಯಗಳಿವೆ. 'ಬನ್ನಂಜೆ ಬರೆಹಗಳು–2' ರಲ್ಲಿಯ "ಧರ್ಮ ಮತ್ತು ಮುಖವಾಡ", ಹಾಗೆಯೇ 'ಬನ್ನಂಜೆ ಬರೆಹಗಳು–5' ರಲ್ಲಿಯ ಅಂಕೆಯಲ್ಲಿ ಅಧ್ಯಾತ್ಮದ ಸಂಖ್ಯೆಗಳ ದೀರ್ಘವಾದ ವಿವರಗಳಿವೆ. ಧಾರ್ಮಿಕ ಲೇಖನಗಳು, ಸಂಶೋಧನ ಲೇಖನಗಳು, ಇತಿಹಾಸಕ್ಕೆ ಸಂಬಂಧಿಸಿದ ಲೇಖನಗಳು, ಸಮಕಾಲೀನ ವಿಷಯಗಳನ್ನು ಕುರಿತ ಲೇಖನಗಳು, ತತ್ವಶಾಸ್ತ್ರ, ಹಸ್ತಪ್ರತಿ–ಗ್ರಂಥ ಸಂಪಾದನೆ, ದಾಸಸಾಹಿತ್ಯ, ಮನಃಶಾಸ್ತ್ರಕ್ಕೆ ಸಂಬಂಧಿಸಿದ ಹಲವು ಲೇಖನಗಳಿವೆ.

ಕಾಳಿದಾಸನ 'ಋತುಸಂಹಾರಮ್' ನ ಕನ್ನಡ ಸೃಜನಶೀಲ ರೂಪವಾದ 'ಋತುಗಳ ಹೆಣಿಗೆ' ಯಲ್ಲಿ ಋತುಗಳ ವರ್ಣನೆಯ ಸೊಬಗನ್ನು ಮತ್ತೆ ಮತ್ತೆ ಆನಂದಿಸಲೇಬೇಕು ಎಂಬಂತಿದೆ. ಬಾಣಭಟ್ಟನ ಕಾದಂಬರಿ, ಮತ್ತೆ ರಾಮನ ಕತೆ (ಭವಭೂತಿಯ 'ಉತ್ತರ ರಾಮ ಚರಿತೆ'ಯ ಕನ್ನಡ ಸೃಜನಶೀಲ ರೂಪ), ನೆನಪಾದಳು ಶಕುಂತಲೆ (ಕಾಳಿದಾಸನ 'ಅಭಿಜ್ಞಾನ ಶಾಕುಂತಲ'ದ ಕನ್ನಡ ಸೃಜನಶೀಲ ರೂಪ) ಆವೆಯಮಣ್ಣಿನ ಆಟದ ಬಂಡಿ (ಶೂದ್ರಕನ 'ಮೃಚ್ಛಕಟಿಕ'ದ ಕನ್ನಡ ಸೃಜನಶೀಲ ರೂಪ). ಮಹಾಭಾರತ ತಾತ್ಪರ್ಯ ನಿರ್ಣಯದ ಸಂಪುಟಗಳು, ಸಂಗ್ರಹ ರಾಮಾಯಣ, ಸಂಗ್ರಹ ಭಾಗವತ, ಹೇಳದೆ ಉಳಿದದ್ದು ಮತ್ತು ಇತರೆ ಕವನಗಳು ಹಾಗೂ ಇನ್ನಷ್ಟು ಹೇಳದೆ ಉಳಿದದ್ದು (ಸ್ವತಂತ್ರ ಹಾಗೂ ಅನುವಾದ) ಎಂಬೆರಡು ಕವನ ಸಂಕಲನಗಳು, ವಿಷ್ಣುಪುರಾಣದ ಕನ್ನಡ ರೂಪವಾದ "ಪರಾಶರ ಕಂಡ ಪರತತ್ವ"ಗಳಂತಹ ಕೃತಿಗಳು ಕನ್ನಡ ಸಾಹಿತ್ಯಕ್ಕೆ ಸೇರ್ಪಡೆಯಾಗಿ, ಭಾಷೆ ಮತ್ತು ಸಾಹಿತ್ಯದ ಘನತೆಯನ್ನು ನೂರ್ಮಡಿಗೊಳಿಸಿವೆಯೆಂದರೆ, ಅತಿಶಯೋಕ್ತಿಯೆನಿಸಲಾರದು. ಸಾಹಿತ್ಯಾಸಕ್ತರಿಗೆ ಅಪ್ಯಾಯಮಾನವೇ ಆಗಿದೆ.

ಪತ್ರಿಕಾ ಸಂಪಾದಕರಾಗಿ, ಅವರ ಸೇವೆ ವಿಶೇಷವಾದುದು. ಸಂಪಾದಕೀಯದಲ್ಲಿಯೂ ಸಮರ್ಥರೆನಿಸಿಕೊಂಡರು. ಆ ಸಂದರ್ಭದಲ್ಲಿ ಅನೇಕ ಲೇಖನಗಳನ್ನು ಸಂಪಾದಿಸಿ, ಸ್ವತಂತ್ರ ಲೇಖನಗಳನ್ನು ಬರೆದರು. ಚಲನಚಿತ್ರ ಕ್ಷೇತ್ರದಲ್ಲೂ ಕೆಲಸ ಮಾಡುವ ಮೂಲಕ, ಚಲನಚಿತ್ರ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಸಂಸ್ಕೃತ ಮತ್ತು ಕನ್ನಡ ಚಲನಚಿತ್ರಗಳಿಗೆ ಅವರು ನೀಡಿರುವ ಕೊಡುಗೆ ವಿಶೇಷವಾಗಿದೆ. "ಶಂಕರಾಚಾರ್ಯ, ಮಧ್ವಾಚಾರ್ಯ ಮತ್ತು ಭಗವದ್ಗೀತೆ ಎನ್ನುವ ಮೂರು ಸ್ವರ್ಣಕಮಲ ವಿಜೇತ ಸಿನಿಮಾಗಳ ಕಥೆ, ಚಿತ್ರಕಥೆ ಮತ್ತು ಸಂಭಾಷಣಾ ವಿಭಾಗದಲ್ಲಿ ತಮ್ಮ ಕೊಡುಗೆ ನೀಡಿದ್ದಾರೆ" (ಗೋವಿಂದ ಮಣಿದರ್ಪಣ ಪು.237). ಆದರೂ

ಬನ್ನಂಜೆಯವರನ್ನು ಪತ್ರಿಕಾ ಸಂಪಾದಕರಾಗಿ, ಕವಿಯಾಗಿ, ವಿಮರ್ಶಕರಾಗಿ, ಸಂಶೋಧಕರಾಗಿ, ಮನಃಶಾಸ್ತ್ರಜ್ಞರಾಗಿ ಜನರು ಒಪ್ಪಿಲ್ಲ.

ಅವರ ನೇರನುಡಿ, ವಿಷಯಜ್ಞಾನ, ವಾಕ್ಚಾತುರ್ಯ, ಭಾಷೆಯ ಬಗೆಗಿನ ಒಲವು ಮತ್ತು ಹಿಡಿತ, ಮೊದಲಾದ ಪ್ರತಿಭೆಯಿಂದ "ವಿದ್ಯಾವಾಚಸ್ಪತಿ" ಬಿರುದು ಸಾರ್ಥಕವೆನಿಸುತ್ತದೆ. "ಯಾವ ಲೇಖನದಲ್ಲಿ ಅಂಕಿ ಅಂಶ, ಇಸವಿ ಇತ್ಯಾದಿಗಳನ್ನು ಅಡಿಟಿಪ್ಪಣಿಗಳಲ್ಲಿ ಅನ್ಯರ ಕೃತಿಗಳ ಪುಟಗಳನ್ನು ತೋರಿಸಿ ಅವರು ನಿರೂಪಣೆ ಮಾಡಲಿಲ್ಲ. ಆದರೆ, ಆ ಲೇಖನಗಳಲ್ಲಿ ಇತಿಹಾಸ ಸಂಶೋಧಕರು ಗಮನಿಸಿದ ಎಷ್ಟೋ ವಿಷಯಗಳಿವೆ" (ಗೋವಿಂದ ಮಣಿದರ್ಪಣ ಪು.107) ಎಂಬ ಪಾದೇಕಲ್ ವಿಷ್ಣುಭಟ್ಟರ ಮಾತು ಮೇಲಿನ ವಾಕ್ಯವನ್ನು ಪುಷ್ಟೀಕರಿಸುವುದಲ್ಲದೆ, ಆಚಾರ್ಯರ ಅಗಾಧ ಪಾಂಡಿತ್ಯಕ್ಕೆ ಸಾಕ್ಷಿಯೆಂಬಂತಿದೆ.

**ಪರಾಮರ್ಶನ ಗ್ರಂಥಗಳು:**

1. ನಾಗರಾಜರಾವ್ ಎಚ್.ವಿ., ಮಲ್ಲೇಪುರಂ ಜಿ. ವೆಂಕಟೇಶ್, ಕೋರ್ಗಿ ಶಂಕರನಾರಾಯಣ ಉಪಾಧ್ಯಾಯ (ಸಂ.), (2022), ಗೋವಿಂದ ಮಣಿದರ್ಪಣ, ಹೊಸಪೇಟೆ: ಯಾಜಿ ಪ್ರಕಾಶನ.
2. ಮಲ್ಲೇಪುರಂ ಜಿ. ವೆಂಕಟೇಶ್, ಕೃಷ್ಣರಾಜ್ ಕುತ್ಪಾಡಿ, ವೀಣಾ ಬನ್ನಂಜೆ (ಸಂ.), (2019), ಬನ್ನಂಜೆಯವರೊಡನೆ ಉಪ–ವಾಸ, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.
3. ಬನ್ನಂಜೆ ಗೋವಿಂದಾಚಾರ್ಯ, (2019), ಋತುಗಳ ಹೆಣಿಗೆ, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.
4. ಬನ್ನಂಜೆ ಗೋವಿಂದಾಚಾರ್ಯ, (2002), ಬನ್ನಂಜೆ ಬರೆಹಗಳು–2, ಬೆಂಗಳೂರು: ಈಶಾವಾಸ್ಯ ಪ್ರತಿಷ್ಠಾನ ಉಡುಪಿ.
5. ಬನ್ನಂಜೆ ಗೋವಿಂದಾಚಾರ್ಯ, (2016–17), ಬನ್ನಂಜೆ ಬರೆಹಗಳು–3, ಬೆಂಗಳೂರು: ಈಶಾವಾಸ್ಯ ಪ್ರತಿಷ್ಠಾನ ಉಡುಪಿ.
6. ಬನ್ನಂಜೆ ಗೋವಿಂದಾಚಾರ್ಯ, (2025), ಬನ್ನಂಜೆ ಬರೆಹಗಳು–3, ಬೆಂಗಳೂರು: ಈಶಾವಾಸ್ಯ ಪ್ರತಿಷ್ಠಾನ ಉಡುಪಿ.
7. ಬನ್ನಂಜೆ ಗೋವಿಂದಾಚಾರ್ಯ, (2019), ಹೇಳದೆ ಉಳಿದದ್ದು ಮತ್ತು ಇತರ ಕವನಗಳು, ಬೆಂಗಳೂರು: ಅಂಕಿತ ಪುಸ್ತಕ ಪ್ರಕಾಶನ.
8. ಬನ್ನಂಜೆ ಗೋವಿಂದಾಚಾರ್ಯ, (2017), ಇನ್ನಷ್ಟು ಹೇಳದೆ ಉಳಿದದ್ದು (ಕವನಗಳು–ಹವನಗಳು), ಹೊಸಪೇಟೆ: ಯಾಜಿ ಪ್ರಕಾಶನ.